ಪೂರಕ ಅನುದಾನ

64 (191) ಶ್ರೀ ಶಿವಲಿಂಗೇಗೌಡ ಕೆ.ಎಂ.:– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಹಲವಾರು ಪ್ರಕರಣಗಳಲ್ಲಿ ಪೂರಕ ಅನುದಾನದ ಮೂಲಕ ಹೆಚ್ಚುವರಿ ಅವಕಾಶವನ್ನು ಕಲ್ಪಿಸಲಾಗಿದ್ದು, ಅಂತಿಮ ವೆಚ್ಚವು ಮೂಲ ಅನುದಾನಕ್ಕಿಂತ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅನಾವಶ್ಯಕವಾಗಿ ಅನುದಾನ ಅವಕಾಶಗಳನ್ನು ಕಲ್ಪಿಸುವ ಪದ್ಧತಿಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ವಾಸ್ತವಿಕ ವೆಚ್ಚ ಸ್ವೀಕೃತಿ ಹಾಗೂ ಹೊಂದಾಣಿಕೆಯ ಮುಖಾಂತರ ಲೆಕ್ಕಪತ್ರಕ್ಕೆ ಸೇರ್ಪಡೆಯಾಗುವ ಮೊತ್ತಗಳನ್ನು ಪ್ರತ್ಯೇಕವಾಗಿ ಲೆಕ್ಕಪತ್ರಗಳಲ್ಲಿ ಬಿಂಬಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ;

ಈ) ಇಲ್ಲದಿದ್ದಲ್ಲಿ ಈ ನ್ಯೂನತೆಯಿಂದಾಗಿ ಪ್ರಮುಖ ಆರ್ಥಿಕ ಮಾನದಂಡಗಳ ಫಲಿತಾಂಶದ ನಿಖರತೆಗೆ ನಿರ್ವಹಿಸುವುದು ಅಸಾಧ್ಯವಾಗಿರುವುದನ್ನು ಗಮನಿಸಲಾಗಿದೆಯೇ;

ಉ) ಗಮನಿಸಿದ್ದಲ್ಲಿ ಕೈಗೊಂಡ ಅನುಸರಣಾ ಕ್ರಮಗಳೇನು;

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು):

ಅ) ಹೌದು. 31–03–2010 ಕ್ಕೆ ಅಂತ್ಯಗೊಂಡಂತೆ ರಾಜ್ಯದ ಹಣಕಾಸಿನ ಬಗ್ಗೆ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ (C&AG) ವರದಿಯ ಅನುಬಂಧ 2.8 ರಲ್ಲಿ ಕಂಡು ಬರುವಂತೆ 12 ಅನುದಾನಗಳಿಗೆ ಸಂಬಂಧಿಸಿದಂತೆ ಒಟ್ಟು ರೂ. 175.34 ಕೋಟಿ ಮೂಲ ಅನುದಾನದ ಜೊತೆಗೆ ಪೂರಕ ಅಂದಾಜು ಅವಕಾಶ ರೂ.192.96 ಕೋಟಿ ಕಲ್ಪಿಸಲಾಗಿದೆ. ಇದರಲ್ಲಿ, ಖರ್ಚಾಗದೆ ಉಳಿದಿರುವ ರೂ.246.67 ಕೋಟಿಗಳಲ್ಲಿ ಬೇಡಿಕೆ ಸಂಖ್ಯೆ.3 (Revenue Voted) ರಲ್ಲಿ ರೂ.153.12 ಕೋಟಿ ಮತ್ತು ಬೇಡಿಕೆ ಸಂಖ್ಯೆ.17 (Revenue Voted) ರಲ್ಲಿ ರೂ.67.91 ಕೋಟಿ.

ಆ) ಅನುದಾನದಲ್ಲಿ ಯೋಜನಾವಾರು ಉಳಿತಾಯವಾದ ಹಣದ ಬಗ್ಗೆ ನಿಖರವಾಗಿ ಊಹಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಸರ್ಕಾರ ಪೂರಕ ಅಂದಾಜಿನ ಮೂಲಕ ಹೆಚ್ಚುವರಿ ಅನುದಾನವನ್ನು ನಿರ್ದಿಷ್ಟ ಯೋಜನೆಗಳಿಗೆ ಒದಗಿಸುವುದರಿಂದ, ಸಮಗ್ರ ಅನುದಾನದಲ್ಲಿ ಉಳಿತಾಯವಾಗುವುದು.

ಇ) ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು (C&AG) ನಿಗದಿಪಡಿಸಿರುವ ಮಾನದಂಡದಂತೆ ಲೆಕ್ಕ ನಿರ್ವಹಣೆಯನ್ನು ಕರ್ನಾಟಕ ಸರ್ಕಾರ ನಿರ್ವಹಿಸುತ್ತದೆ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

2009–10ನೇ ಸಾಲಿನ ಬಳಕೆಯಾಗದೆ ಉಳಿದ ಅನುದಾನ

65 (192) ಶ್ರೀ ಶಿವಲಿಂಗೇಗೌಡ ಕೆ.ಎಂ.(ಅರಸೀಕೆರೆ):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) 2009–10ನೇ ಸಾಲಿನಲ್ಲಿ ಕೆಲವು ಶೀರ್ಷಿಕೆಗಳ ಅಡಿಯಲ್ಲಿ ಬಳಕೆಯಾಗದೇ ಉಳಿದ ಅನುದಾನದ ಅವಕಾಶ 9149.13 ಕೋಟಿ ರೂ.ಗಳಾಗಿದ್ದು, ಈ ಪೈಕಿ 2538.01 ಕೋಟಿ ರೂ.ಗಳನ್ನು ಸಂಬಂಧಪಟ್ಟ ಇಲಾಖೆ ಅದ್ಯರ್ಪಣೆ ಮಾಡೆದೇ ಇರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಈ ಪ್ರವೃತ್ತಿಯಿಂದಾಗಿ ಅತ್ಯವಶ್ಯಕ ವೆಚ್ಚ ಭರಿಸಲು ಸಂಪನ್ಮೂಲ ಕೊರತೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇದಕ್ಕೆ ವ್ಯತಿರಿಕ್ತವಾಗಿ ಮಂಜೂರಾತಿಯ ಅವಲಭ್ಯತೆಯಿಂದಾಗಿ 13 ಪ್ರಕರಣಗಳಲ್ಲಿ ಸಂಪೂರ್ಣ ಅನುದಾನ (1440.99 ಕೋಟಿ ರೂ.ಗಳು) ಅಧ್ಯಾರ್ಪಣೆ ಮಾಡಲಾಗಿದೆಯೇ;

ಈ) ಈ ರೀತಿ ಅಧ್ಯರ್ಪಣೆ ಮಾಡಲಾದ ಪ್ರಕರಣಗಳಲ್ಲಿ ಪುನರ್ವಿನಿಯೋಗವನ್ನು ಮಾಡಲಾಗಿದೆಯೆ; ಇಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):

ಅ) ಹೌದು.

ಆ) ಇಲ್ಲ. ಆಯವ್ಯಯ ಅಂದಾಜಾದ 62.414 ಕೋಟಿ ರೂ.ಗಳಿಗೆ ಹೋಲಿಸಿದಲ್ಲಿ 2009–10ನೇ ಸಾಲಿನ ವಾಸ್ತವಿಕ ವೆಚ್ಚವು 62.964 ಕೋಟಿ ರೂ.ಗಳಾಗಿತ್ತು. ಆದುದರಿಂದ, ಸಮಗ್ರ ಆಯವ್ಯಯ ವೆಚ್ಚವನ್ನು ಮಾಡುವಲ್ಲಿ ಯಾವುದೇ ಸಂಪನ್ಮೂಲದ ಕೊರತೆ ಉಂಟಾಗಿರುವುದಿಲ್ಲ.

ಇ) ಇದರಲ್ಲಿ ಹೆಚ್ಚಿನ ಪಾಲು ಅರ್ಥೋಪಾಯ ಅಗ್ರಿಮ ಧನ (1000 ಕೋಟಿ ರೂ.ಗಳು) ಮತ್ತು ಓವರ್‌ಡ್ರಾಫ್ (350 ಕೋಟಿ ರೂ.ಗಳು)ಗೆ ಸಂಬಂಧಿಸಿದ್ದು, 2009–10ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಯಾವುದೇ ಅರ್ಥೋಪಾಯ ಅಗ್ರಿಮ ಧನ ಸೌಲಭ್ಯ (Ways & Means Facilities) ಅಥವಾ ಓ.ಡಿ (ಓವರ್ ಡ್ರಾಫ್ಟ್)ಯನ್ನಾಗಲೀ ಭಾರತೀಯ ರಿಸರ್ವ್